

ಶಂಕರಾಹಸ್ತಿ ಎಂಬ ರಾಜ್ಯದಲ್ಲಿ ರಾಜನೊಬ್ಬನಿದ್ದನು. ಅವನಿಗೆ ವಿಲಾಸಿ ಜೀವನದಲ್ಲಿ ಬಹಳ ಆಸಕ್ತಿ. ತನ್ನ ವಿಲಾಸಿ ಜೀವನಕ್ಕಾಗಿ ಅವನು ಪ್ರಜೆಗಳಿಗೆ ಹೆಚ್ಚು ತೆರಿಗೆ ವಸೂಲು ಮಾಡುತ್ತಿದ್ದನು. ತೆರಿಗೆ ಕೊಡದ ಜನರ ಮನೆಗೆ ಅಧಿಕಾರಿಗಳನ್ನು ಕಳಿಸಿ ಅವರಿಂದ ಬಲವಂತವಾಗಿ ವಸೂಲಿ ಮಾಡುತ್ತಿದ್ದನು. ಆ ಹಣದಿಂದ ಐಷಾರಾಮಿ ಜೀವನ ನಡೆಸುತ್ತಿದ್ದನು. ಪ್ರಜೆಗಳಿಗೆ ರಾಜನನ್ನು ವಿರೋಧಿಸುವ ಧೈರ್ಯವಿಲ್ಲದೇ ತೆರಿಗೆ ಕಟ್ಟಿ ಕಷ್ಟದ ಜೀವನ ನಡೆಸುತ್ತಿದ್ದರು.

ಹೀಗಿರುವಾಗ ಹಿಮಾಲಯದಿಂದ ತಪಸ್ಸನ್ನಾಚರಿಸಿ ಸಿದ್ಧಿ ಪಡೆದ ಸಾಧು ಒಬ್ಬರು ರಾಜನ ಆಸ್ಥಾನಕ್ಕೆ ಬಂದರು. ಸಾಧುವಿನ ಆಗಮನದ ವಿಚಾರ ತಿಳಿದ ಮಹಾರಾಜನು ಅವರಿಗೆ ಸಕಲ ಮರ್ಯಾದೆಯೊಂದಿಗೆ ಸ್ವಾಗತ ಕೋರಿ, ಆದರದಿಂದ ಬರಮಾಡಿಕೊಂಡನು. ಅವರಿಗೆ ಅರಮನೆಯಲ್ಲಿಯೇ ಒಂದೆರೆಡು ದಿನ ತಂಗಿದ್ದು ಆದರಾತಿಥ್ಯ ಸ್ವೀಕರಿಸುವಂತೆ ಮನವಿ ಮಾಡಿಕೊಂಡನು. ರಾಜನ ಆತಿಥ್ಯದಿಂದ ಸಂತುಷ್ಟನಾದ ಸಾಧು ಅರಮನೆಯಲ್ಲಿ ಎರಡುದಿನ ಉಳಿಯಲು ನಿರ್ಧರಿಸಿದನು.

ಎರಡು ದಿನಗಳ ಬಳಿಕ ಸಾಧು ಆಕಸ್ಮಿಕವಾಗಿ ರಾಣಿಯ ಶಯನಾಗೃಹಕ್ಕೆ ತೆರಳಿದ. ಸಾಧುವಿಗೆ ಅಲ್ಲಿ ಇದ್ದ ರಾಣಿಯ ವಜ್ರದ ಹಾರ ಕಣ್ಣಿಗೆ ಬಿದ್ದಿತು. ಕೂಡಲೇ ಸಾಧು ಅದನ್ನು ಯಾರಿಗೂ ಕಾಣದಂತೆ ಎತ್ತಿಟ್ಟುಕೊಂಡು ಅರಮನೆಯಿಂದ ಕಾಲ್ಕಿತ್ತನು. ಅಲ್ಲಿಂದ ಬಹಳ ದೂರ ಸಾಗಿದ ನಂತರ ಒಂದೆರೆಡು ದಿನ ಮಾಮೂಲಿನಂತೆ ವಿವಿಧ ಗ್ರಾಮಗಳಲ್ಲಿ ಭಿಕ್ಷೆ ಬೇಡಿ ಕಾಲ ಕಳೆದನು. ಒಂದುದಿನ ಇದ್ದಕ್ಕಿದ್ದಂತೆ ಸಾಧು ಅರಮನೆಗೆ ಹಿಂದಿರುಗಿದ. ರಾಜನ ಬಳಿಗೆ ತೆರಳಿ ರಾಣಿಯ ವಜ್ರದ ಹಾರವನ್ನು ಹಿಂದಿರುಗಿಸಿ ತನ್ನಿಂದ ಆದ ತಪ್ಪನ್ನು ಕ್ಷಮಿಸಬೇಕೆಂದು ವಿನಂತಿಸಿಕೊಂಡನು.

ಆಶ್ಚರ್ಯ ಚಕಿತನಾದ ರಾಜನು ಹೀಗೇಕೆ ಮಾಡಿದಿರೆಂದು ಸಾಧುವಿಗೆ ಕೇಳಿದ. ಅದಕ್ಕೆ ಸಾಧು, 'ಎರಡು ದಿನ ನಾನು ಅರಮನೆಯಲ್ಲಿ ಊಟ ಮಾಡಿದೆ. ಅದು ನೀನು ಜನರಿಂದ ದೌರ್ಜನ್ಯ ಮಾಡಿ ವಸೂಲು ಮಾಡಿದ ಪಾಪದ ಹಣದಿಂದ ತಯಾರಿಸಿದ ಅನ್ನ. ಅದನ್ನು ತಿಂದಿದ್ದರಿಂದ ನನಗೂ ಕೆಟ್ಟಬುದ್ಧಿ ಬಂತು. ಆ ಬುದ್ಧಿ ಬಂದಿದ್ದರಿಂದಲೇ ಕಳ್ಳತನ ಮಾಡಬೇಕಾಯಿತು. ಅರಮನೆಯಿಂದ ಹೊರಹೋಗಿ ಕೆಲದಿನ ಗ್ರಾಮದ ಮನೆಗಳಲ್ಲಿ ಭಿಕ್ಷೆ ಬೇಡಿ ಊಟ ಮಾಡಿದ್ದರಿಂದ ನನಗೆ ಒಳ್ಳೆಯ ಯೋಚನೆಗಳು ಬಂದವು. ಬಳಿಕ ಅದನ್ನು ಹಿಂತಿರುಗಿಸಲು ಬಂದೆ' ಎಂದನು.

ಸಾಧುವಿನ ಮಾತುಗಳು ರಾಜನ ಕಣ್ಣು ತೆರೆಸಿದವು. ತಾನು ತಿನ್ನುತ್ತಿರುವುದು ಪಾಪದ ಅನ್ನವಾಗಿದ್ದು ಇನ್ನು ಮುಂದೆ ಈ ರೀತಿ ಪ್ರಜೆಗಳಿಂದ ಬಲವಂತವಾಗಿ ತೆರಿಗೆ ವಸೂಲು ಮಾಡಬಾರದೆಂದು ರಾಜ ನಿರ್ಧರಿಸಿದನು. ತನಗೆ ಮಾರ್ಗದರ್ಶಕರಾಗಿ ಅರಮನೆಯಲ್ಲಿಯೇ ಉಳಿಯಬೇಕೆಂದು ಸಾಧುವನ್ನು ರಾಜ ಕೇಳಿಕೊಂಡ. ಅವರ ಮಾರ್ಗದರ್ಶನದಲ್ಲಿ ಪ್ರಜೆಗಳು ಒಪ್ಪುವಂತಹ ಆಡಳಿತ ನಡೆಸಿದನು.